# <u>ಕರ್ನಾಟಕ ವಿಧಾನ ಪರಿಷತ್ತು</u>

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | 282(342) |
| **ಮಾನ್ಯ ಸದಸ್ಯರ ಹೆಸರು** | : | ಶ್ರೀ ಭೀಮರಾವ್ ಬಸವರಾಜ ಪಾಟೀಲ್<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| **ಉತ್ತರಿಸಬೇಕಾದ ದಿನಾಂಕ** | : | 19.08.2026. |
| **ಉತ್ತರಿಸುವ ಸಚಿವರು** | : | ಮಾನ್ಯ ಇಂಧನ ಮತ್ತು ಪ್ರವಾಸೋದ್ಯಮ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | 2025-26ನೇ ಸಾಲಿನಲ್ಲಿ ಬೀದರ್ ಜಿಲ್ಲೆ ಪ್ರವಾಸೋದ್ಯಮ ಉತ್ತೇಜನ ದೃಷ್ಟಿಯಿಂದ ಸರ್ಕಾರ ಕೈಗೊಂಡ ಹೊಸ ಯೋಜನೆ ಯಾವುವು; | ಬೀದರ್ ಜಿಲ್ಲೆಯಲ್ಲಿ ಪ್ರವಾಸೋದ್ಯಮ ಇಲಾಖೆಯಿಂದ ಉತ್ತೇಜನ ನೀಡಲು ಸಲುವಾಗಿ ಇಲಾಖೆಯಿಂದ ಈ ಕೆಳಕಂಡಂತೆ ಕ್ರಮ ವಹಿಸಲಾಗಿರುತ್ತದೆ;<br><br>• ಬೀದರ್ ಜಿಲ್ಲೆಯು ಒಳಗೊಂಡಂತೆ, ಪ್ರವಾಸೋದ್ಯಮ ನೀತಿ-2024-29ಅನ್ನು ಈಗಾಗಲೇ ಜಾರಿಮಾಡಲಾಗಿದ್ದು, ಪ್ರವಾಸೋದ್ಯಮ ನೀತಿಯನ್ನು ಅನುಷ್ಠಾನಗೊಳಿಸಲು ರೂ.1350 ಕೋಟಿಗಳ ಅನುದಾನವನ್ನು ಮೀಸಲಿರಿಸಲಾಗಿದೆ. ರೂ.8000 ಕೋಟಿಗಳ ನೇರ ಹೂಡಿಕೆಯನ್ನು ಆಕರ್ಷಿಸುವ ಹಾಗೂ 1.5 ಲಕ್ಷ ಉದ್ಯೋಗವಕಾಶಗಳನ್ನು ಸೃಷ್ಟಿಸುವ ಗುರಿಯನ್ನು ಹೊಂದಲಾಗಿದ್ದು, ಈಗಾಗಲೇ ರೂ.1305.11 ಕೋಟಿಗಳ ಮೊತ್ತದ 68 ಹೋಟೆಲ್ ಹಾಗೂ ಇತರೆ ಯೋಜನೆಗಳಿಗೆ ತಾತ್ವಿಕ ಅನುಮೋದನೆ ನೀಡಲಾಗಿದೆ. ಹೋಟೆಲ್ ಯೋಜನೆಗಳಿಗೆ ಸಹಾಯಧನ ನೀಡುವ ಮೂಲಕ ನಮ್ಮ ರಾಜ್ಯದಲ್ಲಿ ಉತ್ತಮ ಗುಣಮಟ್ಟದ ಹೋಟೆಲ್‌ಗಳು ಮತ್ತು ಕೊಠಡಿಗಳ ಸಂಖ್ಯೆಯನ್ನು ಹೆಚ್ಚಿಸಲು ಕ್ರಮ ವಹಿಸಲಾಗಿದೆ. ಈ ನೀತಿಯಡಿ ಗುರುತಿಸಲಾಗಿರುವ 25 ಪ್ರವಾಸಿ ಉತ್ಪನ್ನಗಳನ್ನು ಅಭಿವೃದ್ಧಿಪಡಿಸಲು ಮುಂದೆ ಬರುವ ಖಾಸಗಿ ಬಂಡವಾಳ ಹೂಡಿಕೆದಾರರನ್ನು ಸೆಳೆಯಲು ಸಹಾಯಧನ, ಪ್ರೋತ್ಸಾಹಕಗಳು ಮತ್ತು ರಿಯಾಯಿತಿಗಳನ್ನು ನೀಡಲು ಅವಕಾಶ ಕಲ್ಪಿಸಲಾಗಿರುತ್ತದೆ.<br><br>• 2025-26ನೇ ಸಾಲಿನಲ್ಲಿ ಬೀದರ್ ಜಿಲ್ಲೆಯ ಅಂಗಲಕೇರಿ ಗ್ರಾಮದ ಮೆ: ಅಶೋದೆವ್ ರೆಸಿಡೆನ್ಸಿ ಬೋರ್ಡಿಂಗ್ ಲಾಡ್ಜಿಂಗ್ ಯೋಜನೆಗೆ ರೂ.120 ಲಕ್ಷಗಳನ್ನು ಮತ್ತು ಬೀದರ್ ಜಿಲ್ಲೆಯ ಬಸವಕಲ್ಯಾಣ ತಾಲ್ಲೂಕಿನ ಮೆ: ಕೌಡಲ್ ಹೋಟೆಲ್ ಬೋರ್ಡಿಂಗ್ & ಲಾಡ್ಜಿಂಗ್ ಯೋಜನೆಗೆ ರೂ.52.62 ಲಕ್ಷಗಳನ್ನು ಸಹಾಯಧನವಾಗಿ ಬಿಡುಗಡೆ ಮಾಡಲಾಗಿರುತ್ತದೆ.<br><br>• ಬೀದರ್ ಜಿಲ್ಲೆಯೂ ಒಳಗೊಂಡಂತೆ, ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ಬರುವ ಜಿಲ್ಲೆಗಳಲ್ಲಿ ಖಾಸಗಿ ಹೂಡಿಕೆದಾರರು ಪ್ರವಾಸೋದ್ಯಮ ನೀತಿಯಡಿ ಕೈಗೆತ್ತಿಕೊಳ್ಳುವ ಯೋಜನೆಗಳಿಗೆ ಅರ್ಹ ಯೋಜನಾ (ಇ.ಪಿ.ಸಿ) ಮೊತ್ತಕ್ಕೆ ಶೇ.20% ಅನ್ನು ಸಹಾಯಧನ ನೀಡಲು ಅವಕಾಶ ಕಲ್ಪಿಸಲಾಗಿರುತ್ತದೆ.<br><br>• ಕರ್ನಾಟಕ ಪ್ರವಾಸೋದ್ಯಮ ನೀತಿ 2024-29ರಡಿ ಸರ್ಕಾರದ ಆದೇಶ ಸಂಖ್ಯೆ: ಟಿಒಆರ್/194/ಟಿಡಿಓ/2025, ದಿನಾಂಕ: 07.08.2025 ರನ್ವಯ ರಾಜ್ಯದಲ್ಲಿ ಒಟ್ಟು 1275 ಪ್ರವಾಸಿ ತಾಣಗಳನ್ನು ಗುರುತಿಸಲಾಗಿದ್ದು, ಈ ಪೈಕಿ ಬೀದರ್ ಜಿಲ್ಲೆಯಲ್ಲಿ 24 ಪ್ರವಾಸಿ ತಾಣಗಳನ್ನು ಗುರುತಿಸಲಾಗಿದೆ. ಪ್ರವಾಸಿ ತಾಣಗಳ ವಿವರಗಳನ್ನು **ಅನುಬಂಧ-1ರಲ್ಲಿ** ಒದಗಿಸಿದೆ.<br><br>• ಪ್ರತಿ ವರ್ಷದಂತೆ 2025-26ನೇ ಸಾಲಿನಲ್ಲಿಯೂ ಸಹ ದಿನಾಂಕ:27.09.2025 ರಂದು "**TOURISM AND SUSTAINABLE TRANSFORMATION (ಪ್ರವಾಸೋದ್ಯಮ ಹಾಗೂ ಸುಸ್ಥಿರ ಪರಿವರ್ತನೆ)** ಸಂದೇಶದಡಿಯಲ್ಲಿ "**ವಿಶ್ವ ಪ್ರವಾಸೋದ್ಯಮ ದಿನಾಚರಣೆ-2025**" ಅನ್ನು ಜಿಲ್ಲಾಧಿಕಾರಿಗಳ ಮೇಲುಸ್ತುವಾರಿಯಲ್ಲಿ ಬೀದರ್ ಜಿಲ್ಲೆಯಲ್ಲಿನ ಪ್ರವಾಸಿ ತಾಣಗಳಲ್ಲಿ ಅರ್ಥಪೂರ್ಣವಾಗಿ ಆಚರಿಸಲು ರೂ.50,000/- ಗಳನ್ನು ಇಲಾಖೆಯ ಸಹಾಯಕ ನಿರ್ದೇಶಕರಿಗೆ ಬಿಡುಗಡೆ ಮಾಡಲಾಗಿರುತ್ತದೆ. |

--2

| | | |
|---|---|---|
| ಆ) | 2025-26ನೇ ಸಾಲಿನಲ್ಲಿ ಪ್ರವಾಸೋದ್ಯಮ ಉತ್ತೇಜನಕ್ಕೆ ಸರ್ಕಾರದಿಂದ ಬಿಡುಗಡೆಯಾದ ಅನುದಾನವೆಷ್ಟು? (ತಾಲ್ಲೂಕವಾರು ವಿವರ ನೀಡುವುದು) | • 2025-26ನೇ ಸಾಲಿನಲ್ಲಿ ಬೀದರ್ ಜಿಲ್ಲೆಯಲ್ಲಿ ಪ್ರವಾಸೋದ್ಯಮ ಉತ್ತೇಜನ ಮತ್ತು ಅಭಿವೃದ್ಧಿಗೆ ತಾಲ್ಲೂಕುವಾರು ಇಲಾಖಾ ವತಿಯಿಂದ ಕೈಗೊಳ್ಳಲಾಗುತ್ತಿರುವ ಕಾಮಗಾರಿಗಳಿಗೆ ಬಿಡುಗಡೆ ಮಾಡಿರುವ ಅನುದಾನದ ವಿವರಗಳನ್ನು **ಅನುಬಂಧ-2ರಲ್ಲಿ** ಒದಗಿಸಲಾಗಿದೆ. |

**TOR TDV 2026**

**(ಕೆ.ಜೆ.ಜಾರ್ಜ್)**
ಇಂಧನ ಹಾಗೂ ಪ್ರವಾಸೋದ್ಯಮ ಸಚಿವರು

# ಅನುಬಂಧ - 1
# ನೂತನ ಪ್ರವಾಸಿ ತಾಣಗಳ ವಿವರ

| ಕ್ರ. ಸಂ | ಜಿಲ್ಲೆಯ ಹೆಸರು | ತಾಲ್ಲೂಕಿನ ಹೆಸರು | ಕ್ರ.ಸಂ. | ಪ್ರವಾಸಿ ತಾಣದ ಹೆಸರು | ಪ್ರವಾಸಿ ತಾಣಗಳ ಸಂಖ್ಯೆ |
|---|---|---|---|---|---|
| 1 | ಬೀದರ್ | ಬೀದರ | 1 | ಬೀದರ ಕೋಟೆ | 9 |
| | | | 2 | ಮಹಮ್ಮದ ಗವಾನ ಮದರಸಾ | |
| | | | 3 | ಪಾಪನಾಶ ದೇವಸ್ಥಾನ | |
| | | | 4 | ಗುರುನಾನಕ ಝೀರಾ | |
| | | | 5 | ನರಸಿಂಹ ಝರನಿ ದೇವಸ್ಥಾನ | |
| | | | 6 | ಬರೀದ ಶಾಹಿ ಉದ್ಯಾನವನ | |
| | | | 7 | ಕರೇಜ್ | |
| | | | 8 | ಚೌಖಂಡಿ ಮತ್ತು ಬಹಮನ ಅಷ್ಟೂರ್ ಟೂಮ್ಸ್ | |
| | | | 9 | ಬುದ್ಧ ಮೌಂಟ್, ರೇಕುಳಗಿ | |
| | | ಹುಮನಾಬಾದ | 10 | ವೀರಭದ್ರೇಶ್ವರ ದೇವಸ್ಥಾನ | 4 |
| | | | 11 | ಮಾಣಿಕ ಪ್ರಭು ದೇವಸ್ಥಾನ | |
| | | | 12 | ಸೀಮಿ ನಾಗಣ್ಣಾ ದೇವಸ್ಥಾನ | |
| | | | 13 | ಜಲಸಂಗಿ ದೇವಸ್ಥಾನ | |
| | | ಬಸವಕಲ್ಯಾಣ | 14 | ಬಸವಕಲ್ಯಾಣ ಕೋಟೆ | 5 |
| | | | 15 | ಅನುಭವ ಮಂಟಪ | |
| | | | 16 | 108 ಅಡಿ ಬಸವಣ್ಣ ಮೂರ್ತಿ | |
| | | | 17 | ಉಮಾ ಮಹೇಶ್ವರಿ ದೇವಸ್ಥಾನ, ಉಮಾಪೂರ | |
| | | | 18 | ಪುರಾತನ ಶಿವ ಮಂದಿರ, ನಾರಾಯಣಪೂರ | |
| | | ಔರಾದ (ಬಿ) | 19 | ಅಮರೇಶ್ವರ ದೇವಸ್ಥಾನ ಔರಾದ (ಬಿ) | 1 |
| | | ಭಾಲ್ಕಿ | 20 | ಭಾಲ್ಕಿ ಕೋಟೆ | 4 |
| | | | 21 | ಭಾತಂಬ್ರಾ ಕೋಟೆ | |
| | | | 22 | ಮೈಲಾರ ಮಲ್ಲಣ್ಣಾ ದೇವಸ್ಥಾನ | |
| | | | 23 | ಸಿದ್ದೇಶ್ವರ ದೇವಸ್ಥಾನ ಹೊನ್ನಿಕೇರಿ | |
| | | ಚಿಟಗುಪ್ಪ | 24 | ವೀರಭದ್ರೇಶ್ವರ ದೇವಸ್ಥಾನ, ಚಾಂಗ್ಲೇರಾ | 1 |
| | | | | [illegible] | 24 |

## ಅನುಬಂಧ-2

## 2025-26ನೇ ಸಾಲಿನಲ್ಲಿ ಬೀದರ್ ಜಿಲ್ಲೆಯ ಕಾಮಗಾರಿಗಳಿಗೆ ಬಿಡುಗಡೆ ಮಾಡಿರುವ ಅನುದಾನದ ವಿವರ

(ರೂ.ಲಕ್ಷಗಳಲ್ಲಿ)

| ಕ್ರ. ಸಂ. | ಕಾಮಗಾರಿಯ ಹೆಸರು | ಮಂಜೂರಾದ ವರ್ಷ/ ಯೋಜನೆ | ಆಡಳಿತಾತ್ಮಕ ಅನುಮೋದನೆ ನೀಡಿರುವ ಅಂದಾಜು ಮೊತ್ತ | ಅನುಷ್ಠಾನ ಸಂಸ್ಥೆ | ಮಾರ್ಚ್-2025ರ ಅಂತ್ಯದವರೆಗೆ ಬಿಡುಗಡೆ ಮಾಡಿರುವ ಅನುದಾನ | 2025-26ನೇ ಸಾಲಿನಲ್ಲಿ ಬಿಡುಗಡೆ ಮಾಡಿರುವ ಅನುದಾನ | ಬಾಕಿ | ಷರಾ |
|---|---|---|---|---|---|---|---|---|
| | **ಬೀದರ್ ಜಿಲ್ಲೆ** | | | | | | | |
| | **ಬೀದರ್ ತಾಲ್ಲೂಕು** | | | | | | | |
| 1 | ಬೀದರ್ ನಗರದ ಶ್ರೀ ಬಸವ ಸೇವಾ ಪ್ರತಿಷ್ಠಾನ ಶರಣನಗರ ಬಳಿ ಯಾತ್ರಿನಿವಾಸ ನಿರ್ಮಾಣ | 2017-18 ಬಂಡವಾಳ ವೆಚ್ಚಗಳು | 160.88 | ಲೋ.ಇ ಬೀದರ್ | 50.00 | 80.00 | 30.88 | ಕಾಮಗಾರಿ ಪೂರ್ಣಗೊಂಡಿದೆ. |
| 2 | ಬೀದರ್ ಜಿಲ್ಲೆ, ಬೀದರ್ ತಾಲ್ಲೂಕಿನ ಬೀದರ್ ನಗರ ವ್ಯಾಪ್ತಿಯಲ್ಲಿನ ಮೈಲೂರ ವಾರ್ಡ್ ನಂ.28ರಲ್ಲಿನ ಶ್ರೀ ಶಿವಶರಣ ಹೇಮರೆಡ್ಡಿ ಮಲ್ಲಮ್ಮ ದೇವಸ್ಥಾನದ ಪ್ರವಾಸಿ ಮೂಲಭೂತ ಸೌಕರ್ಯ ಹಾಗೂ ಜೀರ್ಣೋದ್ಧಾರ ಕಾಮಗಾರಿ | 2023-24 ಪ್ರಧಾನ ಕಾಮಗಾರಿಗಳು | 50.00 | ಕೆ.ಟಿ.ಐ.ಎಲ್ | 0.00 | 17.00 | 33.00 | ಪ್ರಗತಿಯಲ್ಲಿದೆ |
| | **ಬಸವಕಲ್ಯಾಣ ತಾಲ್ಲೂಕು** | | | | | | | |
| 3 | ಬೀದರ್ ಜಿಲ್ಲೆಯ ಬಸವಕಲ್ಯಾಣ ತಾಲ್ಲೂಕಿನಲ್ಲಿರುವ ಕೋಟೆ ಸಂರಕ್ಷಣೆ ಅಭಿವೃದ್ಧಿ | 2016-17 ಬಂಡವಾಳ ವೆಚ್ಚಗಳು | 187.62 | ಆಯುಕ್ತರು ಪ್ರ.ಸಂ.ಪ ಮತ್ತು ಪ ಇಲಾಖೆ ಮೈಸೂರು | 125.00 | 62.62 | 0.00 | ಕಾಮಗಾರಿ ಪೂರ್ಣಗೊಂಡಿದೆ. |
| | **ಭಾಲ್ಕಿ ತಾಲ್ಲೂಕು** | | | | | | | |
| 4 | ಬೀದರ್ ಜಿಲ್ಲೆಯ ಭಾಲ್ಕಿ ತಾಲ್ಲೂಕಿನಲ್ಲಿರುವ ಕೋಟೆ ಸಂರಕ್ಷಣೆ ಅಭಿವೃದ್ಧಿ | 2016-17 ಬಂಡವಾಳ ವೆಚ್ಚಗಳು | 198.43 | ಆಯುಕ್ತರು (ಪ್ರ.ಸಂ.ಪ ಮತ್ತು ಪ ಇಲಾಖೆ) ಮೈಸೂರು | 10.00 | 188.43 | 0.00 | ಕಾಮಗಾರಿ ಪೂರ್ಣಗೊಂಡಿದೆ. |
| 5 | ಬೀದರ್ ಜಿಲ್ಲೆಯ ಭಾಲ್ಕಿ ತಾಲ್ಲೂಕಿನ ಭಾತಂಬ್ರ ಕೋಟೆ ಸಂರಕ್ಷಣೆ ಅಭಿವೃದ್ಧಿ | 2016-17 ಬಂಡವಾಳ ವೆಚ್ಚಗಳು | 199.45 | ಆಯುಕ್ತರು (ಪ್ರ.ಸಂ. ಮತ್ತು ಪ ಇಲಾಖೆ) ಮೈಸೂರು | 10.00 | 189.45 | 0.00 | ಕಾಮಗಾರಿ ಪೂರ್ಣಗೊಂಡಿದೆ. |
| | **ಬೀದರ್ ಜಿಲ್ಲೆ ಒಟ್ಟು** | | **796.38** | | **195.00** | **537.50** | **63.88** | |